ಕರ್ನಾಟಕ ಸರ್ಕಾರ
ಕೃಷಿ ಇಲಾಖೆ

ಸಂಖ್ಯೆ: ಸಾಗೊವಿ/ಕೃಪಸಉ/2014-15

ಕೇಂದ್ರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-1,
ದಿನಾಂಕ: 05.08.2014.

# ಸು ತ್ತೋ ಲೆ

ವಿಷಯ: ಇಲಾಖಾ ಕಾರ್ಯಕ್ರಮಗಳಡಿ ರೈತ ಸಂಪರ್ಕ ಕೇಂದ್ರಗಳಲ್ಲಿ ಕೃಷಿ ಪರಿಕರಗಳ ವಿತರಣೆ ಕುರಿತು.

ಉಲ್ಲೇಖ: 1. ದಿನಾಂಕ:19.07.2014 ರಂದು ಕೃಷಿ ಆಯುಕ್ತರು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೈಗೊಂಡ ಪರಿಶೀಲನಾ ಸಭೆಯ ನಡವಳಿಗಳು.
2. ಈ ಕಛೇರಿಯ ಸಮ ಸಂಖ್ಯೆಯ ಸುತ್ತೋಲೆಯ ದಿನಾಂಕ: 26.06.2014.

**********

ಉಲ್ಲೇಖ-2 ರ ಸುತ್ತೋಲೆಯನ್ನು ಮುಂದುವರಿಸುತ್ತಾ, ಕೃಷಿ ಇಲಾಖೆಯ ಹಲವಾರು ಯೋಜನೆಗಳನ್ನು ರೈತ ಸಂಪರ್ಕ ಕೇಂದ್ರದ ಮೂಲಕ ಅನುಷ್ಠಾನ ಮಾಡುವ ಸಂದರ್ಭದಲ್ಲಿ ವಿವಿಧ ಕೃಷಿ ಪರಿಕರಗಳನ್ನು ರೈತರಿಗೆ ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ. ವಿತರಿಸಿದ ಪರಿಕರಗಳಿಗೆ ಪಡೆದ ರೈತರ ವಂತಿಕೆಗೆ ರಸೀದಿಯನ್ನು ನೀಡಬೇಕಾದ ಅಗತ್ಯವಿರುವುದನ್ನು ಮನಗೊಂಡು ಹಾಗು ವಿತರಣೆಯನ್ನು ವ್ಯವಸ್ಥಿತವಾಗಿ, ಕ್ರಮಬದ್ಧವಾಗಿ ನಡೆಸಲು ಯೋಚಿಸಿ ಕೆಲವು ಅಂಶಗಳನ್ನು ಅನುಷ್ಠಾನಕ್ಕೆ ತರಲು ಸೂಚಿಸಲಾಗಿದೆ.

ರೈತ ಸಂಪರ್ಕ ಕೇಂದ್ರಗಳ ಮುಖಾಂತರ ಬಿತ್ತನೆ ಬೀಜಗಳನ್ನು ವಿತರಣೆ ಮಾಡುವಾಗ ಅನುಸರಿಸುವ ಪದ್ಧತಿಯನ್ನೇ ರಿಯಾಯಿತಿ ದರದಲ್ಲಿ ವಿತರಿಸಲಾಗುವ ಜಿಪ್ಸಂ, ಲಘುಪೋಷಕಾಂಶಗಳು, ಸಸ್ಯ ಸಂರಕ್ಷಣಾ ಔಷಧಿಗಳು, ಸಸ್ಯ ಸಂರಕ್ಷಣಾ ಉಪಕರಣಗಳು ಹಾಗು ಇತ್ಯಾದಿಗಳ ವಿತರಣೆಯಲ್ಲಿಯೂ ಈ ಕೆಳಕಂಡಂತೆ ಅನುಸರಿಸುವುದು :

- ಆಯಾ ಪರಿಕರಗಳಿಗೆ ಸಂಬಂಧಿಸಿದಂತೆ ಸಂಸ್ಥೆಯವರು ಸಹಿ ಮಾಡಿರುವ ರಸೀದಿಗಳು ತ್ರಿ ಪ್ರತಿಗಳಲ್ಲಿ ಇರುವಂತೆ ರಸೀದಿ ಪುಸ್ತಕಗಳನ್ನು ಪಡೆಯುವುದು.
- ಪರಿಕರಗಳನ್ನು ಖರೀದಿಸುವ ರೈತರಿಗೆ ಒಂದು ರಸೀದಿಯನ್ನು ನೀಡುವುದು.
- ಉಳಿದ ಎರಡು ಪ್ರತಿಗಳಲ್ಲಿ ಒಂದನ್ನು ಸಂಸ್ಥೆಗೆ ಹಿಂದಿರುಗಿಸುವುದು.
- ಉಳಿದ ಒಂದು ರಸೀದಿಯನ್ನು ರಸೀದಿ ಪುಸ್ತಕದೊಂದಿಗೆ ಕಛೇರಿಯಲ್ಲಿ ನಿರ್ವಹಿಸುವುದು.

ಈ ಪದ್ಧತಿಯನ್ನು ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿಯೂ ಅಳವಡಿಸಲು ಕ್ರಮ ಕೈಗೊಳ್ಳುವುದು.

ಪರಿಕರಗಳನ್ನು ಸರಬರಾಜು ಮಾಡಿದ ಸಂಬಂಧ ಹಣ ಪಾವತಿ ಮಾಡುವಾಗ:

- ಅನುಮೋದಿತ ಸರಬರಾಜು ಸಂಸ್ಥೆಗಳಿಗೆ ಹಣವನ್ನು ಆರ್‌ಟಿಜಿಎಸ್ ಮುಖಾಂತರ ಪಾವತಿಸುವುದು.
- ಇದಕ್ಕಾಗಿ, ಸಂಸ್ಥೆಗೆ ಪಾವತಿ ಮಾಡಬೇಕಾದ ಬ್ಯಾಂಕ್ ಖಾತೆಯ ಸಂಖ್ಯೆ ಮತ್ತು ಐಎಫ್‌ಎಸ್‌ಸಿ ಕೋಡ್ ವಿವರಗಳನ್ನು ಸಂಸ್ಥೆಯವರಿಂದ ಪಡೆಯುವುದು.
- ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಎಲ್ಲಾ ಅನುಮೋದಿತ ಸರಬರಾಜು ಸಂಸ್ಥೆಗಳಿಗೆ ಪಾವತಿಸಬೇಕಾಗಿರುವ ಹಣವನ್ನು ಆರ್‌ಟಿಜಿಎಸ್ ಮೂಲಕ ತುಂಬಲು ಅಗತ್ಯ ಕ್ರಮ ವಹಿಸುವುದು.
- ಆಯಾ ಪರಿಕರಗಳನ್ನು ಮಾರಾಟ ಮಾಡಿದ 10 ದಿನಗಳೊಳಗೆ ರೈತರ ವಂತಿಕೆಯನ್ನು ಮತ್ತು ಕೇಂದ್ರ ಕಛೇರಿಯಿಂದ ಅನುದಾನ ಬಿಡುಗಡೆಯಾದ 15 ದಿವಸಗಳೊಳಗಾಗಿ ಸರ್ಕಾರದ ಸಹಾಯಧನವನ್ನು ಸರಬರಾಜು ಸಂಸ್ಥೆಗಳಿಗೆ ತಪ್ಪದೇ ಪಾವತಿಸುವುದು.

ಆದ್ದರಿಂದ, ಮೇಲೆ ತಿಳಿಸಿರುವ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು, ಒಟ್ಟಾರೆ ಬಿತ್ತನೆಗೆ ಪೂರ್ವದಲ್ಲಿ ಈ ಮೇಲ್ಕಂಡ ಪರಿಕರಗಳನ್ನು ಪಡೆದು ರೈತರಿಗೆ ಪೂರೈಸಲು ಕ್ರಮ ವಹಿಸುವುದು.

5.8.14.

ಕೃಷಿ ಆಯುಕ್ತರು

1. ಪ್ರತಿಯನ್ನು ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಪ್ರತಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಸಿ.ಡಿಸಿ. ಸಂಸ್ಥೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಪ್ರತಿಯನ್ನು ಎಲ್ಲಾ ಅನುಮೋದಿತ ಸರಬರಾಜುದಾರರಿಗೆ ಕಳುಹಿಸುತ್ತಾ, ತಮ್ಮ ಸಂಸ್ಥೆವತಿಯಿಂದ ಸಹಿಮಾಡಿದ ತ್ರಿಪ್ರತಿಗಳ ಬಿಲ್ಲುಗಳನ್ನೊಳಗೊಂಡ ಬಿಲ್ ಪುಸ್ತಗಳನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರವರ ಮುಖಾಂತರ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳಿಗೆ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.